ವನ್ಯಜೀವಿ ಅರಣ್ಯ ಪ್ರದೇಶ ಗುರುತಿಸುವುದು

6 (01) ಶ್ರೀ ಬೋಪಯ್ಯ ಕೆ.ಜಿ. (ವಿರಾಜಪೇಟೆ):– ಮಾನ್ಯ ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ:

(ಅ) ಕೊಡಗು ಜಿಲ್ಲೆಯಲ್ಲಿ ಎಷ್ಟು ವನ್ಯಜೀವಿ ಅರಣ್ಯಗಳಿವೆ; (ವಿವರಗಳನ್ನು ನೀಡುವುದು)

(ಆ) ಈ ಎಲ್ಲಾ ವನ್ಯಜೀವಿ ಅರಣ್ಯ ವಿಭಾಗಗಳ ಗೆಡಿಯನ್ನು ಗುರುತಿಸಲಾಗಿದೆಯೇ;

(ಇ) ಹಾಗಿದ್ದಲ್ಲಿ, ಯಾವಾಗ ಗುರುತಿಸಲಾಯಿತು; ಗುರುತಿಸಲು ಕೈಗೊಂಡಿರುವ ಕ್ರಮಗಳೇನು; (ಪೂರ್ಣ ವಿವರಗಳನ್ನು ಒದಗಿಸುವುದು)

(ಈ) ವನ್ಯಜೀವಿ ಅರಣ್ಯ ಪ್ರದೇಶವನ್ನು ವಿಸ್ತರಿಸುವ ಪ್ರಸ್ತಾವವು ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಪೂರ್ಣ ವಿವರಗಳನ್ನು ಒದಗಿಸುವುದು?

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರು) :–

(ಅ) ಕೊಡಗು ಜಿಲ್ಲೆ ವ್ಯಾಪ್ತಿಯಲ್ಲಿ ಒಂದು ರಾಷ್ಟ್ರೀಯ ಉದ್ಯಾನವನ ಮೂರು ವನ್ಯಧಾಮಗಳಿವೆ

ಕ್ರಮ ಸಂ.	ರಾಷ್ಟ್ರೀಯ ಉದ್ಯಾನವನ ವನ್ಯಧಾಮ	ವಲಯ	ತಾಲ್ಲೂಕು
1	ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಭಾಗಶಃ ಪ್ರದೇಶ	1. ನಾಗರಹೊಳೆ ವನ್ಯಜೀವಿ ವಲಯ 2. ಕಲ್ಲಹಳ್ಳ ವನ್ಯಜೀವಿ ವಲಯ 3. ಆನೆಚೌಕೂರು ವನ್ಯಜೀವಿ ವಲಯ	ವೀರಾಜಪೇಟೆ
2.	ಪುಷ್ಪಗಿರಿ	ಪುಷ್ಪಗಿರಿ ವನ್ಯಜೀವಿ ವಲಯ	ಸೋಮವಾರ ಪೇಟೆ
3.	ತಲಕಾವೇರಿ	ತಲಕಾವೇರಿ ವನ್ಯಜೀವಿ ವಲಯ	ಮಡಿಕೇರಿ
4	ಬ್ರಹ್ಮಗಿರಿ	1. ಶ್ರೀಮಂಗಲ ವನ್ಯಜೀವಿ ವಲಯ 2. ಮಾಕುಟ್ಟ ವನ್ಯಜೀವಿ ವಲಯ	ವೀರಾಜಪೇಟೆ

ಆ) ಹೌದು

ಇ) ಈ ಮೇಲಿನ ವನ್ಯಜೀವಿ ಅರಣ್ಯ ಪ್ರದೇಶಗಳಲ್ಲಿ ಆಯಾ ರಕ್ಷಿತ ಪ್ರದೇಶಗಳ ವ್ಯಾಪ್ತಿಗೆ ಒಳಪಡುವ ಮೀಸಲು ಅರಣ್ಯ – ಪ್ರದೇಶಗಳ ಅಧಿಸೂಚನೆಗಳು ಮತ್ತು ರಕ್ಷಿತ ಪ್ರದೇಶಗಳೆಂದು ಘೋಷಿಸಿರುವ ಅಧಿಸೂಚನೆಗಳ ಅನ್ವಯ ಗಡಿ ಗುರುತಿಸಲಾಗಿದೆ.

ಈ ಕುರಿತು ಸರ್ಕಾರವು ಹೊರಡಿಸಿರುವ ಅಧಿಸೂಚನೆಗಳು ಈ ಕೆಳಕಂಡಂತಿದೆ.

1. **ನಾಗರಹೊಳೆ ರಾಷ್ಟ್ರೀಯ ಉದ್ಯಾನವನ (ಹುಲಿ ಸಂರಕ್ಷಿತ ಪ್ರದೇಶ)**

   ಸರ್ಕಾರದ ಅಧಿಸೂಚನೆ ಸಂಖ್ಯೆ ಎಫ್ಇಇ 45 ಎಫ್‌ಡಬ್ಲ್ಯೂಎಲ್ 2000, ದಿನಾಂಕ: 16–10–2003

2. **ಪುಷ್ಪಗಿರಿ ವನ್ಯದಾಮ:**

   ಸರ್ಕಾರದ ಅಧಿಸೂಚನೆ ಸಂಖ್ಯೆ ಎಫ್ಇಇ 57 ಎಫ್‌ಡಬ್ಲ್ಯೂಎಲ್ 1994, ದಿನಾಂಕ: 13–06–1994

3. **ತಲಕಾವೇರಿ ವನ್ಯದಾಮ:**

   ಸರ್ಕಾರದ ಅಧಿಸೂಚನೆ ಸಂಖ್ಯೆ ಎಫ್ಇಇ 57 ಎಫ್‌ಡಬ್ಲ್ಯೂಎಲ್ 1994, ದಿನಾಂಕ: 13–06–1994.

4. **ಬ್ರಹ್ಮಗಿರಿ ವನ್ಯದಾಮ:**

   ಸರ್ಕಾರದ ಪ್ರಾಥಮಿಕ ಅಧಿಸೂಚನೆ ಸಂಖ್ಯೆ ಎಎಫ್‌ಡಿ 50 ಎಫ್‌ಡಬ್ಲ್ಯೂಎಲ್ 1974, ದಿನಾಂಕ: 05–06–1974.

   ಸರ್ಕಾರದ ಅಂತಿಮ ಅಧಿಸೂಚನೆ ಸಂಖ್ಯೆ ಎಫ್ಇಇ 29 ಎಫ್‌ಡಬ್ಲ್ಯೂಎಲ್ 2013, ದಿನಾಂಕ: 29–07–2013.

ಈ) ಹೌದು ಮಡಿಕೇರಿ ವನ್ಯಜೀವಿ ವಿಭಾಗ ವ್ಯಾಪ್ತಿಯ ಪುಷ್ಪಗಿರಿ ವನ್ಯಧಾಮಕ್ಕೆ ಹಾಸನ ವಿಭಾಗದ ಎಸಳೂರು ಮತ್ತು ಸಕಲೇಶಪುರ ವಲಯದ ಮೀಸಲು ಅರಣ್ಯ ಪ್ರದೇಶವನ್ನು ಸೇರಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.